# ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಪಾವಗಡ

## ಸಿಸಿ ನಂ. 116/2009

**ಚಾಸಾ ಃ 02**

**ಪ್ರಾಸಾ ಃ 03**

**ದಿನಾಂಕಃ 17-09-2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

| | |
|---|---|
| ಹೆಸರು | ಮಲ್ಲಿಕಾರ್ಜುನ |
| ತಂದೆಯ ಹೆಸರು | ಕೋನಪ್ಪ |
| ವಯಸ್ಸು | 50 ವರ್ಷ |
| ವೃತ್ತಿ | ಹಾಲು ವ್ಯಾಪಾರಿ |
| ವಾಸ ಸ್ಥಳ | ವೆಂಕಟಮ್ಮನಹಳ್ಳಿ ಗ್ರಾಮ, ಪಾವಗಡ ತಾ. |

**ಮುಖ್ಯ ವಿಚಾರಣೆ ಃ ಎ ಪಿ ಪಿ ಯವರಿಂದ**

ಸಾಕ್ಷಿಗೆ ನಿಪಿ1 ನ್ನು ತೋರಿಸಿದ್ದು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ನಿಪಿ1 ಕ್ಕೆ ನಾನು ವೆಂಕಟಮ್ಮನಹಳ್ಳಿ ಗ್ರಾಮದ ಬಸ್ ನಿಲ್ದಾಣದಲ್ಲಿ ಸಹಿ ಮಾಡಿರುತ್ತೇನೆ. ಅದರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ಪೊಲೀಸರು ಕೇಳಿದ್ದಕ್ಕೆ ನಾನು ಸಹಿ ಮಾಡಿರುತ್ತೇನೆ. ನನ್ನ ಜೊತೆ ಬೇರೆ ಯಾರು ಸಹಿ ಮಾಡಿರುವುದಿಲ್ಲ. ನನ್ನ ಸಮಕ್ಷಮ ಯಾವುದೇ ವಸ್ತು ಅಮಾನತ್ತುಪಡಿಸಿಕೊಂಡಿರುವುದಿಲ್ಲ.

(ಸಾಕ್ಷಿಯು ವ್ಯತಿರಿಕ್ತವಾಗಿ ನುಡಿದ ಕಾರಣ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಎಪಿಪಿ ಯವರಿಗೆ ಅನುಮತಿಸಲಾಯಿತು)

**ಪಾಟೀಸವಾಲು : ಮಾನ್ಯ ಎಪಿಪಿ ಯವರಿಂದ**

ದಿನಾಂಕಃ 26/04/2003 ರಂದು ಪೆದ್ದಣ್ಣ ಎಂಬುವರ ಮನೆಯಲ್ಲಿ ಬಾಂಬ್ ಇರುವ ಕುರಿತು ಪರಿಶೀಲನೆಗಾಗಿ ಪೊಲೀಸರು ಅವರ ಮನೆಗೆ ಹೋದಾಗ ನನ್ನನ್ನು ಪಂಚರಾಗಿ ಕರೆಸಿರುತ್ತಾರೆಂದರೆ ಸರಿಯಲ್ಲ. ಆ ಸಮಯದಲ್ಲಿ ನನ್ನ ಜೊತೆ ಚಾಸಾ3 ರವರು ಇದ್ದರು ಎಂದರೆ ಸರಿಯಲ್ಲ. ಚಾಸಾ5, 6, 8, 9, 13 ಮತ್ತು 14 ರವರು ನಮ್ಮ ಸಮಕ್ಷಮದಲ್ಲಿ ಪೆದ್ದಣ್ಣನವರ ಮನೆಯ ಒಳಗೆ ಹೋಗಿ ಪರಿಶೀಲಿಸಿದಾಗ ಒಂದು ಗೋಣಿ ಚೀಲದಲ್ಲಿ ಎರಡು ಡಬ್ಬಿಯಲ್ಲಿ ನಾಡಹತ್ತಿ ಬಾಂಬ್‌ಗಳು ಪತ್ತೆಯಾಗಿರುತ್ತದೆಂದರೆ ಸರಿಯಲ್ಲ. ಅವುಗಳನ್ನು ನಮ್ಮ ಸಮಕ್ಷಮ ಅಮಾನತ್ತುಪಡಿಸಿಕೊಂಡಿರುತ್ತಾರೆಂದರೆ ಸರಿಯಲ್ಲ. ನಂತರ ನಿಪಿ1ನ್ನು ನಮ್ಮಸಮಕ್ಷಮ ಜರುಗಿಸಿ ನನ್ನ ಸಹಿ ಪಡೆದು ಕೊಂಡಿರುತ್ತಾರೆಂದರೆ ಸರಿಯಲ್ಲ. ಬಾಂಬ್‌ಗಳನ್ನು ನಮ್ಮ ಸಮಕ್ಷಮದಲ್ಲಿ ಎಫ್ .ಎಸ್.ಎಲ್‌ಗೆ ಕಳುಹಿಸಿಕೊಡಲು ಪ್ಯಾಕ್ ಮಾಡಿರುತ್ತಾರೆಂದರೆ ಸರಿಯಲ್ಲ. ಪಂಚನಾಮೆಯನ್ನು 12.00 ರಿಂದ 1.00 ಗಂಟೆಯವರೆಗೆ ಜರುಗಿಸಿರುತ್ತಾರೆಂದರೆ ಸರಿಯಲ್ಲ. ಆರೋಪಿಗಳು ನಮ್ಮ ಊರಿನವರಾಗಿದ್ದು, ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

**ಓದಿ ಹೇಳಿ ಕೇಳಿ ಸರಿ ಇದೆ.**

**ಎ. ಸಿ. ಜೆ., ಪಾವಗಡ.**